### ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಹರಿಹರ ನಾಮಾಮೃತಂ






ನಮಗೆಲ್ಲರಿಗೂ ತಿಳಿದಿರುವಂತೆ, ಶೃಂಗೇರಿಯಲ್ಲಿರುವ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠದ, ನಮ್ಮ ಪೂಜ್ಯ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂ ಅವರ 50 ನೇ ವರ್ಷದ ಸಂನ್ಯಾಸ ಸ್ವೀಕಾರ ಮಹೋತ್ಸವದ ಸ್ಮರಣಾರ್ಥ, ಸುವರ್ಣ ಭಾರತಿ ಮಹೋತ್ಸವವನ್ನು ಶೃಂಗೇರಿ ಶಾರದಾ ಪೀಠದ ವತಿಯಿಂದ ಆಚರಿಸಲಾಗುತ್ತಿದೆ.

ಆಚರಣೆಯ ಅಂಗವಾಗಿ, ವಿಜಯದಶಮಿ ದಿನದಂದು (ಅಕ್ಟೋಬರ್ 12, 2024), ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ವಿಧುಶೇಖರ ಭಾರತಿ ಸನ್ನಿಧಾನಂ ಅವರು “ಹರಿಹರ ನಾಮ ಅಮೃತ” ಎಂಬ ವಿಶೇಷ ಆಂದೋಲನವನ್ನು ಉದ್ಘಾಟಿಸಿದರು.

ಈ ಆಂದೋಲನಕ್ಕೆ ಸಂಬಂಧಿಸಿದಂತೆ, ಶೃಂಗೇರಿ ಮಠವು ಸನಾತನ ಧರ್ಮದ ಎಲ್ಲಾ ಅನುಯಾಯಿಗಳನ್ನು ತಲುಪಲು ವಿಶೇಷ ಲೇಖನ ಪತ್ರಿಕೆಯನ್ನು ಒದಗಿಸಿದೆ, ಇದರಿಂದಾಗಿ ಅನುಯಾಯಿಗಳು ತಮಗೆ ಅನುಕೂಲಕರವಾದ ಲಿಪಿಯಲ್ಲಿ "ರಾಮ" ಮತ್ತು "ಶಿವ" ಎಂಬ ದೈವಿಕ ಹೆಸರುಗಳನ್ನು 108 ಬಾರಿ ಬರೆಯಲು ಸಾಧ್ಯವಾಗುತ್ತದೆ. ಈ ಆಂದೋಲನದ ಉದ್ದೇಶವೆಂದರೆ, ಏಪ್ರಿಲ್ 2025 ರಲ್ಲಿ ಮುಂಬರುವ ಶ್ರೀ ರಾಮ ನವಮಿಯ ಮೊದಲು, ಪ್ರತಿ ಅನುಯಾಯಿಗೆ ಒಂದು ಪತ್ರಿಕೆಯನ್ನು ವಿತರಿಸುವುದು ಮತ್ತು ಒಂದು ಕೋಟಿ ಅನುಯಾಯಿಗಳಿಂದ ಲಿಖಿತ ರೂಪಗಳನ್ನು ಸಂಗ್ರಹಿಸುವುದು. ಹರಿ ಹರ ನಾಮಗಳನ್ನು ಬರೆಯುವುದರಿಂದ ನಮ್ಮ ಹೆಸರು ಶೃಂಗೇರಿಯ ಶಾರದಾ ಮಾತೆಯ ಪದಮೂಲದಲ್ಲಿ

ಶಾಶ್ವತವಾಗಿ ಉಳಿಯುತ್ತದೆ. ಅದರಿಂದಾಗಿ ನಮ್ಮ ಬದುಕಿನಲ್ಲಿ ಶಾಶ್ವತ ಸುಖ ನೆಲೆಗೊಳ್ಳುವಂತೆ ಪರಮಾತ್ಮ ಸಖ್ಯ ದೊರಕುತ್ತದೆ. ನಾವು ಬರೆಯುವ ಲೇಖನ ಪತ್ರಿಕೆ, ಕೇವಲ ಪತ್ರಿಕೆಯಾಗದೇ ವಾಗೀಶ್ವರೀ ಮಾತೆಯಾಗಿ ಹರಿಹರನಾಮಾಲಯದಲ್ಲಿ ಪೂಜೆಗೊಳ್ಳುತ್ತದೆ. ಲೇಖನ ಪತ್ರಿಕೆ ದೇವತೆಯಾಗುತ್ತದೆ ಮತ್ತು ಸರ್ವರೀತಿಯಲ್ಲೂ ಅನುಗ್ರಹಿಸುತ್ತಾ ಇರುತ್ತದೆ.




ಜಗದ್ಗುರು ಶ್ರೀ ಮಹಾಸನ್ನಿಧಾನಂ ಅವರು ವಿಜಯದಶಮಿಯ ದಿನದಂದು "ರಾಮ" ಮತ್ತು "ಶಿವ" ಎಂಬ ದಿವ್ಯ ನಾಮಗಳನ್ನು 108 ಬಾರಿ ಮೊದಲು ಬರೆದು ನಮ್ಮೆಲ್ಲರನ್ನು ಆಶೀರ್ವದಿಸಿದ್ದಾರೆ.






ಅಕ್ಟೋಬರ್ 29, 2024 ರಂದು, ಶ್ರೀ ಮಹಾಸನ್ನಿಧಾನಂನ ಸನ್ಯಾಸದ 50 ವರ್ಷಗಳು ಪೂರ್ಣಗೊಂಡ ದಿನದಂದು, ಶೃಂಗೇರಿಯ ಕೆಲವು ಪ್ರಮುಖ ಶಾಖಾ ಮಠಗಳಿಗೆ ನಮೂನೆಗಳನ್ನು ವಿತರಿಸಿ, ದೇಶಾದ್ಯಂತ ಈ ಕಾರ್ಯಕ್ರಮವನ್ನು ಪ್ರಾರಂಭಿಸಲು ವಿವಿಧ ಶಾಖಾ ಮಠಗಳಲ್ಲಿ ವಿಶೇಷ ಕಾರ್ಯಕ್ರಮವನ್ನು ನಡೆಸಲಾಯಿತು.



ಈ ಲೇಖನ ಯಜ್ಞಕ್ಕೆ ಅಗತ್ಯವಾದ ಪತ್ರಿಕೆಗಳನ್ನು ನಮ್ಮ ನಾದಾರ್ಚನೆಯ ಮುಖ್ಯ ರೂವಾರಿಯಾದ ಶ್ರೀಮತಿ ಲತಾರವರು ಮೈಸೂರಿನ ಶೃಂಗೇರಿ ಮಠದ ಶಾಖೆಯಿಂದ ಪಡೆದು, ನಾದಾರ್ಚನೆಯ ಸದಸ್ಯರೆಲ್ಲರಿಗೂ ಹಾಗೂ ತಮ್ಮ ಮನೆಯ ಸದಸ್ಯರಿಗೂ ವಿತರಿಸಿ, ಎಲ್ಲರನ್ನೂ ಹುರಿದುಂಬಿಸಿ, ಬರೆದ ಪತ್ರಿಕೆಗಳನ್ನು ಮತ್ತೆ ಮೈಸೂರಿನ ಶೃಂಗೇರಿ ಮಠದ ಶಾಖೆಯಲ್ಲಿ ಸಮರ್ಪಿಸಿ, ಈ ಪುಣ್ಯ ಕಾರ್ಯದಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಎಲ್ಲರಿಗೂ ದಯಪಾಲಿಸಿದ್ದಾರೆ. ವಿದೇಶದಲ್ಲಿರುವ ನಮ್ಮ ನಾದಾರ್ಚನೆಯ ಸದಸ್ಯರಿಗೂ ಈ ಪತ್ರಿಕೆಗಳನ್ನು ಕಳಿಸಿ, ಅವರನ್ನೂ ಈ ಮಹತ್ಕಾರ್ಯಕ್ಕೆ ಭಾಗಿಗಳನ್ನಾಗಿ ಮಾಡಿದ್ದಾರೆ.

ಹರಿಹರ ನಾಮಾಮೃತದ ವಿಶೇಷ ಪ್ರತಿಯ ಮೂಲ ರೂಪ ಹೀಗಿದೆ.



श्रीश्रीजगद्गुरुशङ्कराचार्य महासंस्थानम् , दक्षिणाम्नाय श्रीशारदापीठम् , शृङ्गेरी
Sri Sri Jagadguru Shankaracharya Mahasamsthanam,
Dakshinamnaya Sri Sharada Peetham, Sringeri, 577139

सुवर्णभारती
Suvarna Bharati

हरिहरनामामृतम्
ಹರಿಹರನಾಮಾಮೃತ

| राम | ರಾಮ | రామ | ராம | രാമ | રામ | ৰাম | রাম | ରାମ | ਰਾਮ | Rama |
|---|---|---|---|---|---|---|---|---|---|---|

आपदामपहर्तारं दातारं सर्वसम्पदाम् ।
लोकाभिरामं श्रीरामं भूयो भूयो नमाम्यहम् ॥

ನಿಮಗೆ ಅನುಕೂಲಕರವಾದ ಲಿಪಿಯಲ್ಲಿ ಬರೆಯಿರಿ
Write in a script that is convenient for you
सुविधाजनक लिपि में लिखें।

MAIN FORM



सुवर्णभारती
Suvarna Bharati

हरिहरनामामृतम्
ಹರಿಹರನಾಮಾಮೃತ

| शिव | ಶಿವ | శివ | சிவ | ശിവ | શિવ | শিব | শিব | ଶିବ | ਸ਼ਿਵ | Shiva |
|---|---|---|---|---|---|---|---|---|---|---|

हर शम्भो महादेव विश्वेशामरवल्लभ ।
शिवशङ्कर सर्वात्मन् नीलकण्ठ नमोस्तु ते ॥

MORE INFO

EXTRA FORMS

Date :

Place :

Name :
(in English)

Organisation:
(if any)

Age/Gender :

Mobile :

MAIN FORM

ಒಬ್ಬರು ಇನ್ನೂ ಅಧಿಕ ಪತ್ರಿಕೆಗಳನ್ನು ಬರೆಯಲು ಪ್ರೋತ್ಸಾಹಿಸಿ ವಿತರಿಸಿದ, ಅಧಿಕ ಪತ್ರಿಕೆಯ ರೂಪ ಹೀಗಿದೆ.

श्रीश्रीजगद्गुरुशङ्कराचार्य महासंस्थानम् , दक्षिणाम्नाय श्रीशारदापीठम् , शृङ्गेरी

Sri Sri Jagadguru Shankaracharya Mahasamsthanam,
Dakshinamnaya Sri Sharada Peetham, Sringeri, 577139



हरिहरनामामृतम्
ಹರಿಹರನಾಮಾಮೃತ



आपदामपहर्तारं दातारं सर्वसम्पदाम् ।
लोकाभिरामं श्रीरामं भूयो भूयो नमाम्यहम् ॥

| राम | ರಾಮ | రామ | ராம | രാമ | રામ | ৰাম | রাম | ରାମ | ਰਾਮ | Rama |
|---|---|---|---|---|---|---|---|---|---|---|

| | | | | | |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |

EXTRA FORM

हरिहरनामामृतम्
ಹರಿಹರನಾಮಾಮೃತ





हर शम्भो महादेव विश्वेशामरवल्लभ ।
शिवशङ्कर सर्वात्मन् नीलकण्ठ नमोस्तु ते ॥

MORE INFO

| शिव | ಶಿವ | శివ | சிவ | ശിവ | શિવ | শিব | শিব | ଶିବ | ਸ਼ਿਵ | Shiva |
|---|---|---|---|---|---|---|---|---|---|---|

| | | | | | |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |

Date :

Name :
(in English)

Age/Gender :

SUBMISSION NO: ___

Place :

Organisation:
(if any)

Mobile :

ನಾದಾರ್ಚನೆಯ ಸದಸ್ಯರು ಮತ್ತು ಅವರ ಕುಟುಂಬದ ಸದಸ್ಯರು ಬರೆದ ಪ್ರತಿಗಳು ಸುಮಾರು 870. ಅದರ ವಿವರ ಹೀಗಿದೆ.

| **ಕ್ರ. ಸಂಖ್ಯೆ** | **ಸದಸ್ಯರ ಹೆಸರು** | **ಪ್ರತಿಗಳ ಸಂಖ್ಯೆ** |
|---|---|---|
| 1 | ಲತ ಶ್ರೀಧರ್, ಶ್ರೀಧರ್, ಅರ್ಚನ, ಅಪರ್ಣ | 324 |
| 2 | ಪದ್ಮಾವತಿ | 187 |
| 3 | ಇಂದಿರ | 18 |
| 4 | ಪ್ರಭಾವತಿ | 155 |
| 5 | ಪೂರ್ಣಿಮ ಮತ್ತು ಮನೆಯವರು | 150 |
| 6 | ಸುನೀತ | 108 |
| 7 | ವಸು, ಮಾಲ | 3 |




ಕಲಿಯುಗದಲ್ಲಿ ನರಜನ್ಮ ಸಾಫಲ್ಯಕ್ಕಾಗಿ ಭಗವನ್ನಾಮಸ್ಮರಣೆಯನ್ನು ಮೀರಿದ ಬೇರೊಂದು ಉಪಾಯವಿಲ್ಲ ಎಂಬುದು ಶಾಸ್ತ್ರಗಳ ಉದ್ಘೋಷ. ಭಗವಂತನು ಭಕ್ತರ ಸಲುವಾಗಿ ಅನೇಕ ರೂಪಗಳನ್ನು ಧರಿಸಿದರೂ ತತ್ತ್ವ ದೃಷ್ಟಿಯಿಂದ ಒಬ್ಬನೇ ಆಗಿದ್ದಾನೆ. ಈ ಹಿನ್ನೆಲೆಯಲ್ಲಿ, "ಹರಿಹರ ನಾಮಾಮೃತ" ಭಗವನ್ನಾಮಸ್ಮರಣೆಯ ದಿವ್ಯತೆ ಮತ್ತು ಹರಿ - ಹರರ ಐಕ್ಯವನ್ನು ಸಾರುವ ಒಂದು ವಿಶಿಷ್ಟ ಲೇಖನ ಯಜ್ಞವಾಗಿದೆ. ಇದರಲ್ಲಿ ಭಾಗವಹಿಸಲು ಪ್ರೇರಣೆಯಿತ್ತ ಗುರು ಚರಣಗಳಿಗೆ ಅನೇಕಾನೇಕ ವಂದನೆಗಳು.

**॥ ಶ್ರೀ ಗುರು ಚರಣಾರವಿಂದಾರ್ಪಣಮಸ್ತು ॥**